KATK630016932023

# ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ಮಧುಗಿರಿ

**ಅಪರಾಧಿಕ ಪ್ರಕರಣ ಸಂ. 1431/2023**
(ಅಪರಾಧ ಸಂ : 16/2023)

ಪಿರ್ಯಾದುದಾರರು : ರಾಜ್ಯ ಸರ್ಕಾರ –
ಮಿಡಿಗೇಶಿ ಆರಕ್ಷಕ ಠಾಣೆ.

ವಿರುದ್ಧ

ಆರೋಪಿ : 2 ಆನಂದರೆಡ್ಡಿ ಬಿನ್ ಲೇಟ್ ನಂಜಾರೆಡ್ಡಿ
ಸುಮಾರು 52 ವರ್ಷಗಳು,
ವಾಸ : ಪುಲಮಾತಿ ಗ್ರಾಮ,
ಲೇಪಾಕ್ಷಿ ಮಂಡಲ, ಅನಂತಪುರ ಜಿಲ್ಲೆ.

## ದೋಷಾರೋಪಣೆ

ಶ್ರೀ ರಘುನಾಥಗೌಡ ಕೆ.ಟಿ. ಬಿ.ಕಾಂ. ಎಲ್.ಎಲ್.ಬಿ. C/c ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್..ಸಿ., ಮಧುಗಿರಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಗಳಿಗೆ ಈ ಮೂಲಕ ಗುರಿಪಡಿಸುತ್ತೇನೆ.

ದಿನಾಂಕ : 31–01–2023 ರಂದು ಸಂಜೆ 4–00 ಗಂಟೆಯ ಸಮಯದಲ್ಲಿ ಸಮಯದಲ್ಲಿ ಮಿಡಿಗೇಶಿ ಆರಕ್ಷಕ ಠಾಣಾ ಸರಹದ್ದು ಮಿಡಿಗೇಶಿ ಹೋಬಳಿ, ಚನ್ನಮಲ್ಲೇನಹಳ್ಳಿ ಗ್ರಾಮದ ಸಮೀಪ ಚನ್ನಮಲ್ಲನಹಳ್ಳಿ ಇಂದ ಗರಣಿ ಕೆರೆಗೆ ಹೋಗುವ ಸಾರ್ವಜನಿಕ ಹಳ್ಳದಲ್ಲಿ 1 ನೇ ಆರೋಪಿಯಾದ ನೀವು ಎಪಿ–02–ಎಲ್–7786 ಟ್ರ್ಯಾಕ್ಟರ್ ಮತ್ತು ಟ್ರೈಲರ್‌ನ ಚಾಲಕರಾಗಿದ್ದು ಕೃಷಿ ಉದ್ದೇಶದ ಟ್ರ್ಯಾಕ್ಟರ್‌ಅನ್ನು ವಾಣಿಜ್ಯ ಉದ್ದೇಶಕ್ಕೆ ಬಳಕೆ ಮಾಡಿಕೊಂಡು ಸುಮಾರು ರೂ.1,1,30/– ಮೌಲ್ಯ ಮರಳನ್ನು ಅಕ್ರಮವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಕಳ್ಳತನದಿಂದ ಸಾಗಾಟ ಮಾಡುತ್ತಿರುವುದು ಕಂಡು ಬಂದಿದ್ದು 2 ನೇ ಆರೋಪಿಯಾದ ನೀವು ಮೇಲ್ಕಂಡ ಟ್ರ್ಯಾಕ್ಟರ್ ಟ್ರೈಲರ್ ಗೆ ಯಾವುದೇ ರೀತಿಯ ವಿಮೆಯನ್ನು ಮಾಡಿಸದೇ ಇರುವುದು, ಆ ಮೂಲಕ ನೀವು ಭಾರತೀಯ ಮೋಟಾರು ವಾಹನಗಳ ಕಾಯ್ದೆ ಕಲಂ. 196 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

KATK630016932023

ಆದ್ದರಿಂದ ಈ ಮೇಲಿನ ಅಪರಾಧಕ್ಕೆ ನೀವು ಈ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಆದೇಶಿಸುತ್ತೇನೆ.

**ಆರೋಪಿಯ ಹೇಳಿಕೆ**

1. ಈ ಮೇಲಿನ ನಿಮ್ಮ ದೋಷಾರೋಪಣೆಯನ್ನು ನೀವು ಕೇಳಿದ್ದೀರಾ ?

2 ನೇ ಆರೋಪಿಯ ಉತ್ತರ :

2. ನಿಮ್ಮ ಮೇಲಿನ ದೋಷಾರೋಪಣೆಗೆ ನೀವು ಸಮ್ಮತಿಸಿ ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಚಿಸುವಿರೋ ?

2 ನೇ ಆರೋಪಿಯ ಉತ್ತರ :

(ಈ ಮೇಲಿನ ದೋಷಾರೋಪಣೆಯನ್ನು ಆರೋಪಿಗಳಿಗೆ ತೆರೆದ ನ್ಯಾಯಾಲಯದಲ್ಲಿ ಅವರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು ಅವರು ಕೊಟ್ಟ ಉತ್ತರಗಳನ್ನು ದಾಖಲಿಸಿಕೊಂಡು ಅವು ಸತ್ಯ ಹಾಗೂ ಸರಿ ಎಂದು ಒಪ್ಪಿಕೊಳ್ಳಲಾಯಿತು )

ಸಹಿ/-
(ರಘುನಾಥಗೌಡ ಕೆ.ಟಿ.)
C/c ಅಪರ ಸಿವಿಲ್ ನ್ಯಾಯಾಧೀಶರು ಮತ್ತು
*ಜೆ.ಎಂ.ಎಫ್.ಸಿ, ಮಧುಗಿರಿ.*